

ಆಯ್ಕೆ. ಗಾಢ ಬಣ್ಣದ ಬೀಡ್ ವರ್ಕ್, ಸೀಕ್ವೆನ್ಸ್ ಹಾಗೂ ಡೀಪ್ ನೆಕ್ ಇರುವ ಜಂಪ್‌ಸೂಟ್‌ಗಳು ಪಾರ್ಟಿಗೆ ಹೇಳಿ ಮಾಡಿಸಿದ ಹಾಗೆ ಇರುತ್ತವೆ. ಇದರ ಜೊತೆಗೆ ಮ್ಯಾಚ್ ಆಗುವ ಹಾಗೆ ಮೇಕಪ್ ಮಾಡಿಕೊಂಡರೆ ನೋಡುಗರ ಕಣ್ಣು ಕೋರೈಸುತ್ತದೆ.

## ಬೋಲ್ಡ್ ಕೋಆರ್ಡ್ ಸೆಟ್ಸ್

ಕೋ ಆರ್ಡ್ ಸೆಟ್ಸ್ ಈಗ ತುಂಬಾ ಟ್ರೆಂಡಿಂಗ್‌ನಲ್ಲಿದೆ. ಈಗಂತೂ ಕಣ್ಮನ ಸೆಳೆಯುವಂತಹ ಕೋಆರ್ಡ್ ಸೆಟ್‌ಗಳು ಮಾರುಕಟ್ಟೆಗೆ ಲಗ್ಗೆ ಇಟ್ಟಿವೆ. ಇದನ್ನು ಧರಿಸಿ ಮೇಕಪ್ ಮಾಡಿಕೊಳ್ಳುವುದನ್ನು ಮರೆಯದಿರಿ.

## ಕ್ರಾಪ್ ಟಾಪ್ ಮತ್ತು ಸ್ಕರ್ಟ್ಸ್

ಸ್ಕರ್ಟ್ ಹಾಗೂ ಕ್ರಾಪ್ ಟಾಪ್ ಪಾರ್ಟಿಗೆ ಚೆನ್ನಾಗಿ ಹೊಂದಿಕೆಯಾಗುತ್ತದೆ. ಪಾರ್ಟಿಯಲ್ಲಿ ಮಿಂಚಬೇಕು ಅಂದುಕೊಂಡಿದ್ದರೆ ಮಿನಿ ಸ್ಕರ್ಟ್ ಹಾಗೂ ಚಿಕ್ ಟ್ಯಾಂಕ್ ಟಾಪ್ ಅಥವಾ ಸ್ಟ್ರಿಪ್ಡ್ ಟಾಪ್ ಅನ್ನು ಆಯ್ಕೆ ಮಾಡಿಕೊಳ್ಳಿ. ಇದಕ್ಕೆ ಹೈ ಹೀಲ್ಸ್ ಅಥವಾ ಸ್ಟೈಲಿಷ್ ಲಾಂಗ್ ಬೂಟ್ ಹಾಕಿಕೊಂಡರೆ ಚೆನ್ನಾಗಿ ಕಾಣುತ್ತದೆ.

## ಲೇಸ್ ಟಾಪ್ಸ್

ಲೇಸ್ ಟಾಪ್‌ಗಳನ್ನು ಧರಿಸಿದರೆ ಪಾರ್ಟಿಯಲ್ಲಿ ಸಖತ್ ಆಗಿ ಮಿಂಚಬಹುದು. ಲೇಸ್ ಟಾಪ್ ಕೆಳಗೆ ಬಣ್ಣ ಬಣ್ಣದ ಸ್ಪಾಗೆಟ್ಟಿ/ ಕ್ಯಾಮಿಸೋಲ್‌ಗಳನ್ನು ಹಾಕಿಕೊಳ್ಳಬಹುದು. ಇದಕ್ಕೆ ಮ್ಯಾಚಿಂಗ್ ಆಗಿ ಪೆನ್ಸಿಲ್ ಸ್ಕರ್ಟ್ ಅಥವಾ ಜೀನ್ಸ್ ಹಾಕಿಕೊಳ್ಳಬಹುದು, ಸ್ನೀಕರ್ಸ್ ಅಥವಾ ಹೈ ಹೀಲ್ಸ್ ಹಾಕಿಕೊಂಡರೆ ಅದ್ಭುತವಾಗಿ ಕಾಣುವುದಂತೂ ಗ್ಯಾರಂಟಿ.



## ಮಿನಿ ಡ್ರೆಸ್

ಪಾರ್ಟಿಗೆ ಹೆಚ್ಚಾಗಿ ಮಿನಿ ಡ್ರೆಸ್ ಸಖತ್ ಆಗಿ ಹೊಂದಿಕೆಯಾಗುತ್ತದೆ. ಸೀಕ್ವೆನ್ಸ್ ಹಾಗೂ ಕಾಟನ್ ಪ್ರಿಂಟೆಂಡ್ ಡ್ರೆಸ್ ರಾತ್ರಿ ಪಾರ್ಟಿಗಳಿಗೆ ಹೇಳಿ ಮಾಡಿಸಿದ್ದು. ಇದಕ್ಕೆ ತಕ್ಕ ಹಾಗೇ ಮೇಕಪ್ ಮಾಡಿಕೊಂಡರೆ ಸಖತ್ ಆಗಿ ಮಿಂಚಬಹುದು. ಇದಕ್ಕೆ ಬೂಟ್ಸ್ ಹಾಗೂ ಹೈ ಹೀಲ್ಸ್ ಹಾಕಿದರೆ ಚೆನ್ನಾಗಿ ಕಾಣಿಸುತ್ತದೆ.

## ರೆಟ್ರೋ ಥೀಮ್ ಪಾರ್ಟಿ

ಸಾಮಾನ್ಯವಾಗಿ ಪಾರ್ಟಿಗಳು ಒಂದೇ ರೀತಿ ಇರಲ್ಲ. ಹಾಗಾಗಿ ಆಯಾಯ ಪಾರ್ಟಿಗೆ ತಕ್ಕ ಹಾಗೇ ಡ್ರೆಸಿಂಗ್ ಸ್ಟೈಲ್ ಅನುಸರಿಸಿದರೆ ಸಖತ್ ಆಗಿ ಕಾಣಿಸಿಕೊಳ್ಳಬಹುದು. ರೆಟ್ರೋ ಥೀಮ್ ಪಾರ್ಟಿಗಳಿಗೆ ಕಪ್ಪು ಬಣ್ಣದ ಡ್ರೆಸ್ ಸಖತ್ ಆಗಿ ಮ್ಯಾಚ್ ಆಗುತ್ತದೆ. ಬೋಲ್ಡ್ ಜುವೆಲ್ಲರಿ, ಫಂಕಿ ಹ್ಯಾಟ್, ಬಣ್ಣ ಬಣ್ಣದ ಜಂಪ್‌ಸೂಟ್ ಅಥವಾ ಅರ್ಧ ತೋಳಿನ ಶರ್ಟ್ ಜೊತೆಗೆ ಟ್ರೌಸರ್ಸ್ ಚೆನ್ನಾಗಿರುತ್ತದೆ. ಹಾಗೇ ಕೂಲಿಂಗ್ ಗ್ಲಾಸ್ ಹಾಕುವುದನ್ನು ಮರೆಯಬೇಡಿ.

## ಕಾಕ್‌ಟೇಲ್ ಪಾರ್ಟಿ

ಕಾಕ್‌ಟೇಲ್ ಪಾರ್ಟಿಗೆ ಹೋಗುವವರು ಎಲೈನ್ ಡ್ರೆಸೆಸ್ ಅಥವಾ ಉದ್ದನೆಯ ಮ್ಯಾಕ್ಸಿ ಡ್ರೆಸ್ ಹಾಕಿಕೊಂಡರೆ ಲುಕ್ ಚೆನ್ನಾಗಿರುತ್ತದೆ. ಬೋಲ್ಡ್ ಕಲರ್ ಡ್ರೆಸ್ ಪಾರ್ಟಿಯಲ್ಲಿ ಮಿಂಚುವ ಹಾಗೆ ಮಾಡುತ್ತದೆ. ಪ್ಯಾಂಟ್ ಸೂಟ್ಸ್, ಸ್ಲೀಕ್ ಟ್ರೌಸರ್ಸ್ ಅಥವಾ ಪಲಾಜೊ ಸೆಟ್ಸ್ ಕಾಕ್‌ಟೇಲ್ ಪಾರ್ಟಿಗೆ ಹೇಳಿಮಾಡಿಸಿದ್ದು. ಹೀಲ್ಡ್ ಬೂಟ್ ಹಾಕಿಕೊಂಡರೆ ಇದು ಲುಕ್ ಅನ್ನು ಮತ್ತಷ್ಟು ಹೆಚ್ಚಿಸುತ್ತದೆ.

### ಪೂಲ್ ಪಾರ್ಟಿ

ಎಲ್ಲಾ ಬಗೆಯ ಉಡುಪುಗಳು ಎಲ್ಲಾ ಪಾರ್ಟಿಗೂ ಸರಿಯಾಗಿ ಮ್ಯಾಚ್ ಆಗುವುದಿಲ್ಲ. ಆಯಾಯ ಪಾರ್ಟಿಗೆ ತಕ್ಕ ಹಾಗೆ ಡ್ರೆಸ್ ಹಾಕಿದರೆ ಪಾರ್ಟಿಯಲ್ಲಿ ನೀವು ಎದ್ದುಕಾಣಬಹುದು. ಪೂಲ್ ಪಾರ್ಟಿಯಲ್ಲಿ ನಿಮ್ಮ ಉಡುಗೆ ಆ ಸ್ಥಳಕ್ಕೆ ಹೊಂದುವ ಹಾಗೆ ಇರಬೇಕು. ಫ್ಲೋರಲ್ ಒನ್‌ಪೀಸ್ ಡ್ರೆಸ್ ಜೊತೆಗೆ ಫ್ಲ್ಯಾಟ್ ಸ್ಯಾಂಡಲ್ಸ್ ಚೆನ್ನಾಗಿ ಮ್ಯಾಚ್ ಆಗುತ್ತದೆ. ಹಾಗೇ ಆರಾಮದಾಯಕವಾದ ಬಿಕಿನಿ ಅಥವಾ ಸ್ವಿಮ್ ಸೂಟ್ ಹಾಕಿಕೊಂಡರೆ ಪಾರ್ಟಿ ಲುಕ್ ಎಲ್ಲರ ಕಣ್ಮನ ಸೆಳೆಯುತ್ತದೆ.